# ಗೋಹಕ್ಕಿಯ 'ಫುಡ್ ಫೈಟಿಂಗ್'



ಜೀವಿಗಳಲ್ಲಿ ನಡೆಯುವ ಆಹಾರದ ಹುಡುಕಾಟ ಮತ್ತು ಅದನ್ನು ಉಳಿಸಿಕೊಳ್ಳುವುದಕ್ಕಾಗಿ ನಡೆಯುವ ಹೋರಾಟ ನಿಜಕ್ಕೂ ವಿಸ್ಮಯಕಾರಿ.

■ ಪ್ರಕಾಶ ಎಸ್. ಮನ್ನಂಗಿ

ಚಿತ್ರ: ಆಕಾಶ

ಮೋಟೇಬೆನ್ನೂರು– ಕಾಟೇನಹಳ್ಳಿ ರಸ್ತೆಯಲ್ಲಿ ಹೊರಟಿದ್ದೆ. ಹಿಂದಿನ ದಿನ ಮಳೆ ಬಂದು ಹೊಲಗಳಲ್ಲಿ ಮಳೆ ನೀರು ಸಣ್ಣ ಗುಂಡಿಗಳಲ್ಲಿ ನಿಂತಿತ್ತು. ಅತ್ತಿತ್ತ ಹಾರಾಡುವ ಪಕ್ಷಿಗಳನ್ನು ವೀಕ್ಷಿಸುತ್ತ ಬೈಕ್ ಮೇಲೆ ಸಾಗಿದ್ದೆ.

ಕೆಂಪು ಮಳೆ ನೀರಿನಲ್ಲಿ ಹಲವು ಬೆಳ್ಳಕ್ಕಿಗಳು ಬೇಟೆಯನ್ನು ಕಾಯುತ್ತ ತುದಿ ಕಾಲ ಮೇಲೆ ನಿಂತಿದ್ದವು. ಕೊಕ್ಕನ್ನು ರಾಡಿ ನೀರಿನಲ್ಲಿ ಮುಳುಗಿಸುತ್ತ ಆಹಾರ ಹುಡುಕುತ್ತಿದ್ದವು. ಕೆಲವು ಧ್ಯಾನಸ್ಥ ಸ್ಥಿತಿಯಲ್ಲಿ ಕಾಯುತ್ತಿದ್ದವು. ಅಷ್ಟರಲ್ಲೊಂದು ಮ್ಯಾಜಿಕ್ ನಡೆಯಿತು. ಗೋಹಕ್ಕಿಯೊಂದಕ್ಕೆ ಕಪ್ಪೆಯೊಂದು ಸಿಕ್ಕಿತು. ಅದು ಕೊಕ್ಕಿನಲ್ಲಿ ಅದನ್ನು ಹಿಡಿದೆತ್ತಿ ಕಬಳಿಸಬೇಕು ಎನ್ನುವಷ್ಟರಲ್ಲಿ ಶುರುವಾಯಿತು ಹೋರಾಟ. ಬೈಕನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಕುತೂಹಲ ಕಣ್ಣಾಗಿ ಮೌನವಾಗಿ ನಿರುಕಿಸತೊಡಗಿದೆ. ಆಕಾಶನ ಕ್ಯಾಮರ ಅದಾಗಲೇ ತನ್ನ ಕೆಲಸ ಆರಂಭಿಸಿತ್ತು. ಅಷ್ಟೊತ್ತಿಗೆ ಪಕ್ಕದಲ್ಲಿದ್ದ ಗೋಹಕ್ಕಿಗಳು ಆಶೆಗಣ್ಣಿನಿಂದ ಆಹಾರವನ್ನು ನೋಡತೊಡಗಿ, ತಮಗೂ ಪಾಲು ಬೇಕೆಂಬ ಹಕ್ಕೊತ್ತಾಯದಿಂದ ಕಪ್ಪೆಯನ್ನು ಕೊಕ್ಕಿನಲ್ಲಿ ಹಿಡಿದ ಗೋಹಕ್ಕಿಯ ಹತ್ತಿರಕ್ಕೆ ಸರಿಯತೊಡಗಿದವು.

ಅವುಗಳಿಂದ ತಪ್ಪಿಸಿಕೊಂಡು ಆರಾಮಾಗಿ ಭೋಜನ ಮಾಡಿದರಾಯಿತೆಂದು ಗೋಹಕ್ಕಿ ಸಮೀಪದ ದಿಬ್ಬವೊಂದರ ಮೇಲೆ ಹೋಗಿ ಕುಳಿತಿತು. ಅಯ್ಯೋ! ಅಲ್ಲಿಯೂ ತಪ್ಪಲಿಲ್ಲ ಕಾಟ. ಧುತ್ತೆಂದು ಅದೆಲ್ಲಿತ್ತೋ ಕಾಗೆಯೊಂದು ಬಂದು ವಕ್ಕರಿಸಿಕೊಂಡಿತು. ಅದರಿಂದ ತಪ್ಪಿಸಿಕೊಳ್ಳಲು ಅಲ್ಲಿಂದ ಹಾರಿ ಮೊದಲು ಬೇಟೆ ಹಿಡಿದಿದ್ದ ನೀರು ಗುಂಡಿಗೆ ಬಂತು.

ನೀರಲ್ಲಿ ಕಪ್ಪೆಯನ್ನು ಅದ್ದಿ ಅದ್ದಿ ಸ್ವಚ್ಛಗೊಳಿಸುವ ನಾಟಕ ಮಾಡಿ, ತಿನ್ನಬೇಕೆಂದು ಕೊಂಡಿತು. ಆದರೆ  ಕಾಗೆ ಬಿಡಬೇಕಲ್ಲ? ಮತ್ತೆ ಅಲ್ಲೂ ಬಂದು ಬಾಯ್ದೆರೆದಿತು. ಗೋಹಕ್ಕಿ ಅದರಿಂದ ಪಾರಾಗಲು ಹಾರಲು ಆರಂಭಿಸಿತು.